ರಾಜ್ಯದ ಜಲಸಂಪನ್ಮೂಲ ಸಚಿವರು ಕೇಂದ್ರ ಜಲ ಸಂಪನ್ಮೂಲ ಸಚಿವರಿಗೆ ಬರೆದಿರುವ ದಿನಾಂಕ: 17.07.2008ರ ಪತ್ರದಲ್ಲಿ ತಮಿಳು ನಾಡು ಸರ್ಕಾರವು ಯೋಜನೆಯನ್ನು ಮುಂದುವರೆಸದಂತೆ ಆ ರಾಜ್ಯಕ್ಕೆ ನಿರ್ದೇಶನ ನೀಡಲು ಹಾಗೂ ಸದರಿ ವಿಷಯವು ಎರಡೂ ರಾಜ್ಯಗಳ ನಡುವೆ ಇತ್ಯರ್ಥವಾಗುವವರೆಗೆ ಯೋಜನೆಗೆ ನೀಡಿರುವ ಅಭ್ಯಂತರ ರಹಿತ ಪತ್ರವನ್ನು ತಡೆ ಹಿಡಿಯುವಂತೆ ಕೋರಲಾಗಿದೆ. ಮುಂದುವರೆದು, ವಿಷಯವನ್ನು ಇತ್ಯರ್ಥ ಮಾಡಲು ಎರಡೂ ರಾಜ್ಯಗಳ ಪ್ರತಿನಿಧಿಗಳನ್ನು ಚರ್ಚೆಗೆ ಕರೆಯುವಂತೆ ಸಹ ಕೋರಲಾಗಿದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : (365)189
ಸದಸ್ಯರ ಹೆಸರು : ಶ್ರೀ ವಿ.ಸೋಮಣ್ಣ
ಉತ್ತರಿಸಬೇಕಾದ ಸಚಿವರು : ಶ್ರೀ ಗೂಳಿಹಟ್ಟಿ ಡಿ.ಶೇಖರ್. ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು.

ಅ) ಬೀಜಿಂಗ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್ ಕ್ರೀಡೆಗಳನ್ನು ವೀಕ್ಷಿಸಲು ರಾಜ್ಯ ಸರ್ಕಾರದಿಂದ ಕ್ರೀಡಾಪಟುಗಳು, ಅಧಿಕಾರಿಗಳು ಹಾಗೂ ಇತರ ಗಣ್ಯರ ತಂಡವನ್ನು ಕಳುಹಿಸಲು ಸರ್ಕಾರ ನಿರ್ಧರಿಸಿದೆಯೇ?

– ಇಲ್ಲ –

ಆ) ಹಾಗಿದ್ದಲ್ಲಿ, ಎಷ್ಟು ಜನರ ತಂಡವನ್ನು ಕಳುಹಿಸಲು ನಿರ್ಧರಿಸಲಾಗಿದೆ ಹಾಗೂ ವೀಕ್ಷಣೆಗೆ ತೆರಳಿರುವ ಈ ತಂಡದಲ್ಲಿ ಕ್ರೀಡಾಪಟುಗಳ ಅಧಿಕಾರಿಗಳ ಹೆಸರುಗಳು ಹಾಗೂ ಇತರ ಗಣ್ಯರ ವಿವರ ನೀಡುವುದು;

– ಉದ್ಭವಿಸುವುದಿಲ್ಲ –

ಇ) ಇದಕ್ಕಾಗಿ ತಗುಲುವ ಅಂದಾಜು ವೆಚ್ಚವೆಷ್ಟು?

– ಉದ್ಭವಿಸುವುದಿಲ್ಲ –

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ : (380) 190
ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ (ಮಂಡ್ಯ)
ಉತ್ತರಿಸಬೇಕಾದ ಸಚಿವರು : ಶ್ರೀ ಗೂಳಿಹಟ್ಟಿ ಡಿ.ಶೇಖರ್ ಜವಳಿ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು.

ಅ) ಮಂಡ್ಯ ನಗರದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣಕ್ಕೆ ಈವರೆಗೆ ಮಾಡಿದ ವೆಚ್ಚದ ಹಣವೆಷ್ಟು; ಅದರ ಮೂಲ ವಿನ್ಯಾಸಗಳ ವಿವರಗಳೇನು;